SRI C. M. ARMUGAM.—The question is pending for the last five years and Government also sent the Vice-Chairman and the General Manager to visit the place to select a site. Will the Government take a decision to establish the bus depot.

SRI R. GUNDURAO.—Yes. A bus depot will be established.

Abolition of Octroi system

560. SRI MALLUR ANANDA RAO (Rajajinagar).—Will he Minister for Municipal Administration be pleased to state;—

(*a*) whether the Government is aware of the difficulties experie-need by the business community and the General public by the continuation of the system of octroi.

(*b*) If so, whether there is any proposal before the Government to abolish the Octroi?

SRI H.C. SRIKANTAIAH (Minister for Municipal Administration).—

(*a*) Yes.

(*b*) The proposal to abolish Octroi as under consideration.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಈ ಪ್ರಶ್ನೆಯ (ಆ)ಗೆ ಉತ್ತರವಾಗಿ ಸುಂಕ ಪದ್ಧತಿಯನ್ನು ರದ್ದುಗೊಳಿಸುವ ಸಲಹೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಇದು ಎಷ್ಟು ದಿವಸದಿಂದ ಪರಿಶೀಲನೆಯಲ್ಲಿದೆ. ಇದರ ಬಗ್ಗೆ ಯಾವಾಗ ನಿರ್ಧಾರ ತೆಗೆದುಕೊಳ್ಳುತ್ತೀರಿ ? ಮತ್ತು ಇದಕ್ಕೇನಾದರೂ ಪರ್ಯಾಯ ವ್ಯವಸ್ಥೆ ಸರ್ಕಾರದ ಪರಿಶೀಲನೆಯಲ್ಲಿದೆಯೇ ಎನ್ನುವುದರ ಬಗ್ಗೆ ವಿವರಗಳನ್ನು ತಿಳಿಸ ಬಯಸುತ್ತೀರಾ ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕೇಂದ್ರ ಸರ್ಕಾರದವರು ಈ ಆಕ್ಟ್ರಾಯಿಯನ್ನು ಅಬಾಲಿಷ್ ಮಾಡಬೇಕು ಎಂದು ಸೂಚನೆ ಕೊಟ್ಟಮೇಲೆ ಇದು ಪರಿಶೀಲನೆಯಲ್ಲಿದೆ ಅಂತ ಹೇಳಿದೆ.

ಮೊನ್ನೆ ಕೇಂದ್ರದ ಹಣಕಾಸಿನ ಸಚಿವರು ಇಲ್ಲಿಗೆ ಬಂದಿದ್ದಾಗ ನಮ್ಮ ರಾಜ್ಯದ ಮುಖ್ಯಮಂತ್ರಿಗಳವರು ನಾನು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ವಿವರವಾಗಿ ಚರ್ಚೆ ನಡೆಸಿ, ನಮ್ಮ ಸರ್ಕಾರಕ್ಕೆ ಇದರಿಂದ ಎಷ್ಟು ಕೋಟಿ ರೂಪಾಯಿಗಳು ಬರುತ್ತಿದೆ. ಅದನ್ನು ನಿಲ್ಲಿಸಿದರೆ ಅದಕ್ಕೆ ಪರಿಹಾರವಾಗಿ ಏನು ಮಾಡಬೇಕು ಎನ್ನುವ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿದೆವು. ಆದರೆ ಇನ್ನೂ ಯಾವ ನಿರ್ಧಾರಕ್ಕೂ ಬರಲಿಲ್ಲ. ಮಾನ್ಯ ಮಿತ್ರರಿಗೇ ಗೊತ್ತಿರುವ ಹಾಗೆ ಇವತ್ತು ಆಕ್ಟ್ರಾಯಿನಿಂದಲೇ ಮುನಿಸಿಪಾಲಿಟಿಗಳಿಗೆ ಮುಖ್ಯವಾದ ವರಮಾನವಾಗಿದೆ. ಈ ಆಕ್ಟ್ರಾಯಿ ನಿಂತು ಹೋದರೆ, ಅಲ್ಲಿಯ ಅಭಿವೃದ್ಧಿ ಕಾರ್ಯಕ್ರಮಗಳೂ ಕೂಡ ಸ್ಥಗಿತವಾಗುತ್ತದೆ. ಅದಕ್ಕಾಗಿಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರದವರು ಸಮಾಲೋಚನೆ ಮಾಡಿ ಅದನ್ನು ಯಾವ ರೀತಿಯಾಗಿ ತುಂಬಬೇಕು, ಮುನಿಸಿಪಾಲಿಟೀಸ್ ಗಳಿಗೆ ಆದರಿಂದ ಆಗತಕ್ಕಂಥ ನಷ್ಟವನ್ನು ಯಾವ ರೀತಿಯಾಗಿ ಪರಿಹಾರ ಮಾಡಬೇಕು ಎನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ ಇನ್ನೂ ಅದರ ಬಗ್ಗೆ ಅಂತಿಮವಾದ ತೀರ್ಮಾನವಾಗಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಮೊದಲನೆಯದಾಗಿ ಈಗಿರತಕ್ಕಂಥಾದ್ದು ತುಂಬಾ ಹಳೆಯ ಕಂದಾಚಾರದ ಪದ್ಧತಿಯಾಗಿದೆ ಇದರಿಂದಾಗಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಬರುವಂಥಾದ್ದು ಸೋರಿ ಹೋಗುತ್ತಿದೆ. ಮತ್ತೆ ಅಲ್ಲಿ ಭ್ರಷ್ಟಾಚಾರವಿದೆ, ಆದುದರಿಂದ ಮಹಾರಾಷ್ಟ್ರದಲ್ಲಿ ಈ ಆಕ್ಟ್ರಾಯಿ ಸುಂಕವನ್ನು ತೊಡೆದು ಹಾಕಿದ್ದಾರೆ, ಅದರ ಬದಲು ವ್ಯಾಪಾರಸ್ಥರ ಮೇಲೆ ಆ ಕರಭಾರವನ್ನು ಹಾಕಿ ಅವರಿಂದ ಪಡಯಬಹುದೆಂದು ಮಾಡಿದ್ದಾರೆ. ಇದರ ಬಗ್ಗೆ ಚೇಂಬರ್ಸ್ ಆಫ್

ಕಾಮರ್ಸ್‌ನವರೂ ಸಲಹೆ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಸಹ ಇದರ ಬಗ್ಗೆ ತಮಗೆ ಸಲಹೆ ಕೊಟ್ಟಿದ್ದಾರೆ. ಆದುದರಿಂದ ತಾವು ಇದನ್ನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಶೀಘ್ರವಾಗಿ ಚರ್ಚೆ ಮಾಡಿ ಈ ಆಕ್ಟ್ರಾಯಿ ಹಾಕುವುದನ್ನು ರದ್ದು ಮಾಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಮಹಾರಾಷ್ಟ್ರ ರಾಜ್ಯದಲ್ಲಿ ಪೂರ್ಣವಾಗಿ ರದ್ದು ಮಾಡಿಲ್ಲ, ರದ್ದು ಮಾಡುತ್ತೇವೆಂದು ಅವರು ಹೇಳಿಕೆ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು, ಪುರಸಭೆಗಳಿಗೆ ಇದರಿಂದಾಗಿ ಕೊರತೆ ಬೀಳತಕ್ಕಂಥ ಹಣವನ್ನು ಯಾವ ರೀತಿಯಾಗಿ ಭರ್ತಿ ಮಾಡುತ್ತಾರೆ ಎಂಬುದನ್ನು ಹೇಳಿಲ್ಲ, ಅದರ ಬಗ್ಗೆ ಕೇಂದ್ರ ಸರ್ಕಾರದವರು ಭರವಸೆ ಕೊಟ್ಟಾಗ ಮಾತ್ರ ರದ್ದು ಮಾಡುವುದಾಗಿ ಮಹಾರಾಷ್ಟ್ರ ಸರ್ಕಾರದವರು ಹೇಳಿದ್ದಾರೆ. ಆ ರೀತಿಯಾಗಿ ತೀರ್ಮಾನ ಮಾಡಿದ್ದಾರೆ ಅಷ್ಟೇ. ಆದುದರಿಂದ ನಾವು ಸಹ ಇದನ್ನು ರದ್ದು ಮಾಡುವುದಕ್ಕಿಂತ ಮುಂಚಿತವಾಗಿ ಅರ್ಥ ಮಂತ್ರಿಗಳೊಂದಿಗೆ ಮಾತನಾಡಬೇಕಾಗುತ್ತದೆ, ಆದಕ್ಕಾಗಿ ಯೋಚನೆ ಮಾಡುತ್ತಿದ್ದೇವೆ. ನಮಗೆ ಆದರಿಂದ ೧೯೭೭-೭೮ರಲ್ಲಿ ಬರತಕ್ಕಂಥ ಆದಾಯ ೨೦-೨೫ ಕೋಟಿ ರೂಪಾಯಿಗಳು. ಇದು ವರ್ಷೇ ವರ್ಷೇ ಜಾಸ್ತಿಯಾಗುತ್ತಾ ಹೋಗುತ್ತಿರುತ್ತದೆಯೇ ಹೊರತು ಕಡಿಮೆಯಾಗತಕ್ಕಂಥ ಪ್ರಸಂಗವಿರುವುದಿಲ್ಲ. ವ್ಯಾಪಾರ ಮಹಿವಾಟು ದಿನೇ ದಿನೇ ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯಾಗತಕ್ಕ ಪ್ರಸಂಗವಿರುವುದಿಲ್ಲ. ತಾವು ಹೇಳಿದ ಹಾಗೆ ಆಕ್ಟ್ರಾಯಿಸಲ್ಲಿ ಲೀಕೇಜ್ ಇದೆ, ಅದು ನಡೆಯುತ್ತಿದೆ ಅದು ಸರ್ಕಾರದ ಗಮನಕ್ಕೂ ಬಂದಿದೆ. ಅದನ್ನು ಯಾವ ರೀತಿಯಾಗಿ ಬಿಗಿ ಮಾಡಬೇಕೋ ಆ ರೀತಿಯಾಗಿ ಬಿಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದುದರಿಂದ ಇವತ್ತು ೨೦-೨೫ ಕೋಟಿ ವರಮಾನವೇನಿದೆ ಅದನ್ನು ಯಾವ ರೀತಿಯಾಗಿ ತುಂಬಬೇಕು ಎನ್ನುವುದು ಬಹಳ ಪ್ರಮುಖ್ಯವಾದ ಪ್ರಶ್ನೆಯಾಗಿದೆ. ಆದುದರಿಂದ ಮೊದಲು ಅದನ್ನು ರದ್ದು ಮಾಡುವುದಕ್ಕಿಂತ ಮುಂಚಿತವಾಗಿ ಅದಕ್ಕೆ ಪರಿಹಾರ ಏನು ಎಂಬುದನ್ನು ಕಂಡು ಹಿಡಿದು ಆ ಮೇಲೆ ರದ್ದು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ, ಅದು ಇನ್ನೂ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳವರ ಅವಗಾಹನೆಗೆ ಒಂದು ವಿಷಯವನ್ನು ತರಬಯಸುತ್ತೇನೆ. ನಿಮ್ಮ ಮಾನ್ಯ ಅರ್ಥ ಮಂತ್ರಿಗಳವರೇ ಇದರ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದಾರೆ, ಈ ಆಕ್ಟ್ರಾಯಿ ಸೋರಿ ಹೋಗುತ್ತಿದೆ, ಆ ದೃಷ್ಟಿಯಿಂದ ಇದನ್ನು ಅಬಾಲಿಷ್ ಮಾಡುವುದು ಸರಿ ಎನ್ನುವ ಮಾತನ್ನು ಅವರೂ ಹೇಳಿದ್ದಾರೆ. ಆದುದರಿಂದ ಕೇಂದ್ರದೊಡನೆ ವಿಚಾರವಿನಿಮಯ ಮಾಡಿ ಆದಕ್ಕೆ ಯಾವ ರೀತಿಯಾಗಿ ಕಾಂಪನ್‌ಸೇಟ್ ಮಾಡುತ್ತಾರೆಂದು ಕೇಳುವುದು ಸರ್ಕಾರದ ನೀತಿ ಆಗಿಲ್ಲವೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಾನು ಹೇಳತಕ್ಕಂಥಾದ್ದು ಅದೇ, ಇದರ ಬಗ್ಗೆ ತೀರ್ಮಾನ ಮಾಡಿ ಅದನ್ನು ಕೈ ಬಿಡಬೇಕು ಎನ್ನತಕ್ಕಂಥದ್ದೇ ಇದೆ; ಆದರೆ ಇನ್ನೂ ಆದರ ಬಗ್ಗೆ ಪೂರ್ಣವಾಗಿ ಪರಿಶೀಲನೆಯಾಗಬೇಕಾಗಿದೆ. ಕೇಂದ್ರದ ಹಣಕಾಸಿನ ಸಚಿವರು ಕೂಡ ಈ ಆಕ್ಟ್ರಾಯನ್ನು ರದ್ದು ಮಾಡುವುದರಿಂದ ಸುಮಾರು ೨೦೦ ಕೋಟಿ ರೂಪಾಯಿಗಳು ಕಡಿಮೆಯಾಗುತ್ತದೆಂದು, ಆದನ್ನು ಭರ್ತಿ ಮಾಡಲು ಯಾವ ರೀತಿ ಪ್ಲಾನ್ ಮಾಡಬೇಕೆಂಬುದಾಗಿ ಯೋಚನೆ ಮಾಡುತ್ತಿರುವುದಾಗಿ ತಿಳಿಸಿವ್ದಾರೆ. ಆದುದರಿಂದ ಅದನ್ನು ಬಹುಮುಖ್ಯವಾಗಿ ತೆಗೆದುಹಾಕತಕ್ಕಂಥದ್ದು ಉತ್ತಮ ಅಭಿಪ್ರಾಯವೇ ಆಗಿದೆ. ಅಂತೂ ಇನ್ನೂ ಅದರ ಬಗ್ಗೆ ಅಂತಿಮ ತೀರ್ಮಾನವಾಗಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಲೀಕೇಜ್ ಏನಿದೆ ಅದರ ಅಂಕಿಸಂಖ್ಯೆಗಳು ನನ್ನ ಹತ್ತಿರವಿಲ್ಲ. ಅದರಲ್ಲಿ ಲೀಕೇಜ್ ಆಗುತ್ತಿರುವುದರಲ್ಲಿ ನಿರ್ವಿವಾದ ಮಾತು. ಎಷ್ಟಿದೆ ಎನ್ನುವುದು ನನ್ನ ಪತ್ತಿರ ಸಮಾಚಾರ ಇಲ್ಲ, ಭ್ರಷ್ಟಾಚಾರ ಕೂಡ ನಡೆಯುತ್ತಿದೆ ಅದರೊಳಗೆ, ಯಾವ ಅನುಮಾನವೂ ಇಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.—ಲಾಸ್ ಮಾಡಿದ್ದಾರೆ ತಾಳಿ ಕಟ್ಟಿಲ್ಲ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಎರಡೂ ನಿಮಗೆ ಅನುಭವವಿಲ್ಲ, ಇನ್ನು ನೀವು ಏನು ಹೇಳುತ್ತೀರಿ ?

ಶ್ರೀ ಮಳ್ಳೂರು ಆನಂದರಾವ್.—ಮೊದಲನೆಯ ಅನುಭವವಿಲ್ಲವೆಂದು ನೀವು ಅದು ಹೇಗೆ ಹೇಳುತ್ತೀರಿ ?

SRI G. B. SHANKAR RAO.—Nearly Rs. 20 Crores is being collected mostly from the business community. If this Octroi is removed, then it has to be compensated by means of other taxation. Will the Hon. Minister assure that incidence of taxation must be on the business community only and not on the ryots ?

SRI H. C. SRIKANTAIAH.—We have not taken any decision. The Government is considering this matter. Therefore, whether to put it on the business men or on the agriculturists etc., has not yet been decided. We are going decide about it at the time of abolition of Octroi. That will have to be decided, otherwise, how can the Municipalities work properly ?

ಶ್ರೀ ಟಿ. ಆರ್. ಶಾಮಣ್ಣ.—ಈ ಆಕ್ಟ್ರಾಯಿನಿಂದ ಬರುವ ವರಮಾನ ಎಷ್ಟುಮುಖ್ಯವಾಗಿ ಮುನಿಸಿಪಾಲಿಟಿಗಳಿಗೆ ಮತ್ತು ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ವಿಚಾರವಾಗಿದೆ. ಇದರ ಬಗ್ಗೆ ತಾವು ಅಂತಿಮವಾದ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ಅಲ್ಲಿರುವ ಸದಸ್ಯರುಗಳಿಂದ ಸಲಹೆಗಳನ್ನೇನಾದರೂ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಮತ್ತು ಆಕ್ಟ್ರಾಯ್‌ಯನ್ನು ಪರಿಣಾಮಕಾರಿಯಾಗಿ ವಸೂಲಿ ಮಾಡುವುದಕ್ಕೆ ಏನಾದರೂ ಉತ್ತಮವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮುನಿಸಿಪಾಲಿಟಿಗಳು, ಕಾರ್ಪೊರೇಷನ್‌ಗಳು ಸರ್ಕಾರದ ಅಧೀನದಲ್ಲಿರುತ್ತವೆ, ನಮ್ಮ ಅನುಮತಿ ಇಲ್ಲದೆ ಅವರು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ತಾವು ಹೇಳಿದ ಹಾಗೆ ಅಂತಿಮವಾಗಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ಅಲ್ಲಿರುವ ಸದಸ್ಯರುಗಳನ್ನು, ಶಾಸಕರುಗಳೆಲ್ಲರನ್ನೂ ಕರೆದು ಯಾವ ರೀತಿಯಾಗಿ ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡೋಣ. ಅಲ್ಲದೇ ಮುನಿಸಿಪಾಲಿಟಿಯವರು ಸರ್ಕಾರದವರು ಅಂಗೀಕಾರ ಕೊಟ್ಟ ಮೇಲೆ ತಾನೇ ಅವರು ಮಾಡಬೇಕಾಗಿರುವುದು ?

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಮಹಾರಾಷ್ಟ್ರ, ಕೇರಳ ಮತ್ತು ಯು.ಪಿ. ರಾಜ್ಯಗಳಲ್ಲಿ ಈ ಆಕ್ಟ್ರಾಯನ್ನು ತೆಗೆದು ಹಾಕಿದ್ದಾರೆ. ಅವರು ಮುನಿಸಿಪಾಲಿಟಿ ಕಾರ್ಪೊರೇಷನ್ನು ಅಭಿವೃದ್ಧಿ ಕಾರ್ಯಗಳಿಗೆ ಅವರು ಹೇಗೆ ಹಣವನ್ನು ಒದಗಿಸುತ್ತಿದ್ದಾರೆ ಎನ್ನುವುದರ ಬಗ್ಗೆ ಸರ್ಕಾರದವರು ಏನಾದರೂ ಮಾಹಿತಿ ಸಂಗ್ರಹ ಮಾಡಿದ್ದಾರೆಯೇ ? ಎರಡನೆಯ ಪ್ರಶ್ನೆ ಕೇಂದ್ರ ಸರ್ಕಾರದವರಿಂದ ಸ್ವಲ್ಪ ಮಟ್ಟಿಗೆ ಕಾಂಪನ್‌ಸೇಷನ್ ಸಿಕ್ಕಿ, ಬಾಕಿದಕ್ಕೆ ಯಾವ ರೀತಿಯಾಗಿ ಭರ್ತಿ ಮಾಡಬೇಕು ಎನ್ನುವುದರ ಬಗ್ಗೆ ತಾವು ಏನಾದರೂ ಸ್ವಲ್ಪ ಮಟ್ಟಿಗೆ ಇತರೇ ಮಾರ್ಗಗಳನ್ನು ಏನಾದರೂ ಹುಡುಕಿದ್ದೀರಾ ? ಹೇಗೆ ಎಂಬುದನ್ನು ತಿಳಿಸಬೇಕು ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈ ಸಂದರ್ಭದಲ್ಲಿ ಅದನ್ನು ತಿಳಿಸತಕ್ಕಂಥದ್ದು ಸರಿಯಲ್ಲ. ಅದರ ಬಗ್ಗೆ ಇನ್ನು ಯಾವುದೇ ನಿರ್ದಿಷ್ಟವಾದ ಯೋಚನೆಗಳನ್ನೂ ಸಹ ಮಾಡಿಲ್ಲ. ಏತಕ್ಕೆಂದರೆ ಸರ್ಕಾರದವರು ಅರ್ಥ ಖಾತೆಯವರ ಹತ್ತಿರ ಬಹು ಮುಖ್ಯವಾಗಿ ಅವರೊಡನೆ ವಿಚಾರವಿನಿಮಯ ಮಾಡಬೇಕಾಗುತ್ತದೆ. ಆದುದರಿಂದ ಇದನ್ನು ಹೇಗೆ ಮಾಡಬಹುದು ಎನ್ನುವ ಬಗ್ಗೆ ನಾನಾ ತರಹದ ಯೋಚನೆಗಳನ್ನು ಮಾಡಿದ್ದೇವೆ ಆದರೆ ನಿರ್ದಿಷ್ಟವಾದ ಯಾವುದೇ ಯೋಜನೆಯನ್ನೂ ಇನ್ನೂ ಮಾಡಿಲ್ಲ.

ಶ್ರೀ ಪಿ. ರಾಮದೇವ್.—ಈ ಆಕ್ಟ್ರಾಯಿನಲ್ಲಿ ಹಣ ಸೋರಿಹೋಗುತ್ತಿದೆಂದು ತಾವು ತಿಳಿಸಿ ಒಪ್ಪಿಕೊಂಡಿರಿ, ಅದಕ್ಕೆ ನಾನು ತಮ್ಮ ಮುಖಾಂತರ ಕೇಳಿಕೊಳ್ಳುವುದು ಇಷ್ಟೇ, ವ್ಯಾಪಾರಸ್ಥರು ಆಕ್ಟ್ರಾಯಿ ಕೊಡಲು ವಿರೋಧಿಸುತ್ತಿಲ್ಲ ಆದರೆ ಅಲ್ಲಿ ಆಗುತ್ತಿರತಕ್ಕಂಥ ಕೆರುಕಾಳದ ಬಗ್ಗೆ ಮಾತ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಮತ್ತು ಅಲ್ಲಿ ಸೋರಿ ಹೋಗುತ್ತಿರುವ ಹಣವನ್ನು ತಪ್ಪಿಸುವುದಕ್ಕಾಗಿ ಈ ಹಣವನ್ನು ವಸೂಲಿ ಮಾಡಲು ಖಾಸಗಿ ವಲಯಗಳಿಗೆ ಅಂದರೆ ಛೇಂಬರ್ಸ್ ಆಫ್ ಕಾಮರ್ಸ್ ಇಂಥಾ ಖಾಸಗಿವಲಯಗಳವರೆಗೆ ವಹಿಸಲು ತಯಾರಾಗಿದ್ದೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದು ಒಬ್ಬರಿಂದ ಆಗತಕ್ಕಂಥದ್ದು ಅಲ್ಲ, ಅಧಿಕಾರಿಗಳು ಮತ್ತು ಮಂತ್ರಿಗಳು ಸೇರಿದರೆ ಮಾತ್ರ ಆ ರೀತಿಯಾಗಿ ಹಣ ಸೋರಿಹೋಗಲು ಸಾಧ್ಯ ಇಲ್ಲದಿದ್ದರೆ ಆ ರೀತಿ ಹಣ ಸೋರಿ ಹೋಗುವುದಿಲ್ಲ. ಆದುದರಿಂದ ಆ ರೀತಿಯಾಗಿ ಸೋರಿಹೋಗುತ್ತಿರುವುದನ್ನು ತಪ್ಪಿಸ ಬೇಕಾದರೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಹೇಗೆ ಬಿಗಿ ಮಾಡಬೇಕು ಎನ್ನುವುದರ ಬಗೆ ಸರ್ಕಾರದವರು ಕ್ರಮ ಕೈಗೊಳ್ಳುತ್ತದೆ. ಖಾಸಗಿ ವಲಯಗಳಿಗೆ ಕೊಡತಕ್ಕಂಥದ್ದು ಸೂಕ್ತವಲ್ಲ.

ಶ್ರೀ ಮಳ್ಳೂರು ಆನಂದರಾವ್.—ಈ ವಿಷಯ ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟಿದ್ದೀರಿ ಈಗ ತಮ್ಮ ಉತ್ತರ ಕೇಳಿದ ಮೇಲೆ ಇದು ಬೇರೆ ಬೇರೆ ಮುಖಗಳಿಂದ ಪರಿಶೀಲನೆ ಮಾಡುತ್ತಿದ್ದೀರಿ ಎಂದು ಅರ್ಥವಾಯಿತು. ಈ ಬಗ್ಗೆ ಸಂಬಂಧಪಟ್ಟ ಎಲ್ಲರ ಸಭೆ ಕರೆದು ಅವರ ಸಲಹೆಗಳನ್ನು ಪಡೆದು ಬೇಗನೆ ಒಂದು ನಿರ್ಧಾರ ಕೈಕೊಳ್ಳುತ್ತೀರಾ ?

೧-೦೦ ಪಿ.ಎಂ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದನ್ನು ರದ್ದು ಮಾಡಬೇಕಾದರೆ ಸಭೆಯನ್ನು ಕರೆಯಬೇಕಾಗಿಲ್ಲ ಸರ್ಕಾರವೇ ರದ್ದು ಮಾಡಬಹುದು. ಆದರೆ ಇದನ್ನು ರದ್ದು ಮಾಡಬೇಕಾದರೆ ಇದರಿಂದ ಬರತಕ್ಕಂಥ ಆದಾಯವನ್ನು ಬೇರೆ ರೀತಿಯಿಂದ ಪಡೆದುಕೊಳ್ಳುವ ವಿಧಾನದ ಬಗ್ಗೆ ತಮ್ಮಿಂದ ಸಲಹೆಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದಕಾರಣ ಈ ಇಲಾಖೆಯ ಡಿಮ್ಯಾಂಡ್ಸ್ ಚರ್ಚೆಗೆ ಬಂದಾಗ ತಾವುಗಳು ತಮ್ಮ ಸಲಹೆಗಳನ್ನು ಈ ಬಗ್ಗೆ ಕೊಡಬಹುದು.

ಶ್ರೀ ಮಳ್ಳೂರು ಆನಂದರಾವ್.—ಇದರಿಂದ ವ್ಯಾಪಾರಿಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಯಾಗುತ್ತಿದೆ. ಇಂತಹ ವಿಚಾರದ ಬಗ್ಗೆ ಎಲ್ಲ ಕಡೆಗಳಿಂದಲೂ ಸಲಹೆಗಳು ಬರಲಿ ಎಂದು ನಿಧಾನ ಮಾಡುವುದು ಸೂಕ್ತವಲ್ಲ. ತಾವು ತ್ವರಿತವಾಗಿ ಒಂದು ಸಭೆ ಕರೆದು ನಿರ್ಣಯ ಮಾಡಬೇಕು; ಮತ್ತು ಇದಕ್ಕೆ ತಾವು ಒಂದು ಕಾಲಮಿತಿ ಹಾಕುವುದು ಒಳ್ಳೆಯದು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದು ಮಾನ್ಯ ಆನಂದರಾವ್ ಅವರು ಹೇಳುವಷ್ಟು ಸುಲಭವಾದ ಕೆಲಸವಲ್ಲ. ಇದನ್ನು ತೆಗೆಯಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಮೂಡಿದೆ. ಆದರೆ ಇದನ್ನು ತೆಗೆಯ ಬೇಕಾದರೆ ಏನು ಮಾಡಬೇಕು ಎಂಬುದೇ ಮೊದಲನೆಯ ಪ್ರಶ್ನೆ. ಈಗಾಗಲೇ ಸಂಬಂಧಪಟ್ಟ ಅಧಿಕಾರಿ ಗಳಿಗೆ ಈ ಬಗ್ಗೆ ವಿಷಯ ಸಂಗ್ರಹ ಮಾಡುವುದಕ್ಕೆ ಹೇಳಿದ್ದೇವೆ. ಇನ್ನು ಕೆಲವಾರು ದಿವಸಗಳಲ್ಲಿಯೇ ಈ ಬಗ್ಗೆ ನಾನು ತಮಗೆ ತಿಳಿಸುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು.

QUESTIONS FOR ANSWERS ON THE DAY
(but not taken up)

The role of the Karnataka Small Industries Development Corporation.

272. SRI V. S. KOUJALAGI (Arbhavi).—Will the Minister for Industries and Commerce be pleased to state :—

In what way the Karnataka Small Scale Industry Development Corporation is serving and assisting the small scale industries in the State ?

SRI AZEEZ SAIT (Minister for Industries and Commerce).—

The following are the activities through which the Karnataka Small Industries Development Corporation is serving/assisting the Small Scale Industries in the State :

1. Construction, maintenance and management of Industrial Estates in the State ;